## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.52/2020**

| | | |
|---|---|---|
| ಸಾಕ್ಷಿದಾರರ ಹೆಸರು | ವಿರೇಂದ್ರ | |
| ತಂದೆಯಹೆಸರು | ಚಂದ್ರಣ್ಣ | ಡಿ .ಡಬ್ಲ್ಯೂ-1 |
| ವಯಸ್ಸು | 44 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಪಿಡಬ್ಲ್ಯೂಡಿ ಕಂಟ್ರ್ಯಾಕ್ಟರ್ | ದಿನಾಂಕಃ |
| ವಾಸಃ | ಕರ್ಕಿಕೊಪ್ಪ, ಸಾಗರ | 04.05.2026 |

**ಮೌಖಿಕ ಮುಖ್ಯ ವಿಚಾರಣೆಃ ಆರೋಪಿತನ ವಕೀಲರಾದ ಶ್ರೀ ಎಂ.ಆರ್.ಎಸ್ ರವರಿಂದಃ**

1. 2 ನೇ ಆರೋಪಿತನು ನನಗೆ ಗೊತ್ತು. ಫಿರ್ಯಾದಿ ನನಗೆ ಗೊತ್ತು. ನನ್ನ ಮತ್ತು ಫಿರ್ಯಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ. ನನಗೂ ಮತ್ತು ಫಿರ್ಯಾದಿಗೂ ಫಿರ್ಯಾದಿಯ ಮನೆಯ ಸಂಬಂಧ ಮನಸ್ತಾಪ ಇತ್ತು. ಫಿರ್ಯಾದಿಯು 2 ನೇ ಆರೋಪಿತನ ತೋಟದಲ್ಲಿ ಬೆಳೆದ ಬಾಳೇಹಣ್ಣು, ಪೈನಾಪಲ್ ಅನ್ನು ಖರೀದಿ ಮಾಡಿ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದನು. ಸದರಿ ಫಿರ್ಯಾದಿಯು 2 ನೇ ಆರೋಪಿತನ ಮನೆಯಲ್ಲಿದ್ದ ಚೆಕ್ ಅನ್ನು ತೆಗೆದುಕೊಂಡು ಹೋಗಿ ಅದರಲ್ಲಿ ನನ್ನ ಹೆಸರನ್ನು ಬರೆದು ಬ್ಯಾಂಕಿಗೆ ಹಾಜರು ಪಡಿಸಿದ್ದಾನೆ. ಸದರಿ ಚೆಕ್ಕಿನಲ್ಲಿರುವ ಸಹಿ ಮತ್ತು ಇತರೆ ವಿವರಗಳನ್ನು ನಾನು ಬರೆದಿಲ್ಲ. ಚೆಕ್ ಬೌನ್ಸ್ ಆಗಿ ವಕೀಲರಿಂದ ನೋಟೀಸ್ ಬಂದ ನಂತರ ನನಗೆ ಈ ಕೇಸಿನ ಬಗ್ಗೆ ತಿಳಿದಿರುತ್ತದೆ. ಫಿರ್ಯಾದಿಯು ಆಪಾಧಿಸಿದಂತೆ ನಾನು ಯಾವುದೇ ಅಪರಾಧವನ್ನು ಮಾಡಿಲ್ಲ, ಫಿರ್ಯಾದಿಯಿಂದ ಹಣವನ್ನು ಸಾಲವಾಗಿ ಪಡೆದಿಲ್ಲ ಮತ್ತು ಅವನಿಗೆ 2 ನೇ ಆರೋಪಿತನ ಚೆಕ್ ಅನ್ನು ನಾನು ಸಹಿ ಮಾಡಿ ನೀಡಿಲ್ಲ. ಫಿರ್ಯಾದಿಗೆ ಹಣವನ್ನು ಸಾಲವಾಗಿ ನೀಡುವಷ್ಟು ಆರ್ಥಿಕ ಸಾಮಾರ್ಥ್ಯ ಇಲ್ಲ. ಆದ್ದರಿಂದ ನನ್ನನ್ನು ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಬೇಕಾಗಿ ಕೋರುತ್ತೇನೆ.

**ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.